## ಪಶ್ಚಿಮ ವಲಯ ವ್ಯಾಪ್ತಿಯ, ಮಲ್ಲೇಶ್ವರಂ ಉಪವಿಭಾಗದ ಗಾಯತ್ರಿನಗರ ವಾರ್ಡ್-76ರಲ್ಲಿ ದಿನಾಂಕ: 26-08-2021 ರಂದು ನಡೆದ ವಾರ್ಡ್ ಸಮಿತಿ ಸಭೆಯ

### ಸಭಾ ನಡವಳಿಗಳು.

ವಾರ್ಡ್ ಸಂಖ್ಯೆ-76 ಗಾಯತ್ರಿನಗರ　　　　ಸಮಯ ಮಧ್ಯಹ್ನ　　ಘಂಟೆಗೆ

ದಿನಾಂಕ: 26-08-2021 ರಂದು ವಾರ್ಡ್ ಸಂಖ್ಯೆ: 76ರ ಆಗಸ್ಟ್ ಮಾಹೆಯ ವಾರ್ಡ್ ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. ವಾರ್ಡ್ ಸಂಖ್ಯೆ: 76ರ ಸಹಾಯಕ ಅಭಿಯಂತರರು ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತವನ್ನು ಕೋರಿದರು ಹಾಗೂ ಸದಸ್ಯರುಗಳೆಲ್ಲರ ಕಿರು ವಿವರ ತಿಳಿಸಿ, ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಯ್ದುಯಕೊಂಡು ಸಭೆ ನಡೆಸಲು ಕೋರಿದರು.

**ಸಭೆಗೆ ಹಾಜರಿದ್ದವರು:**

| | |
|---|---|
| 1 | ಶ್ರೀ ಚಂದ್ರಶೇಖರ್. ಹೆಚ್.ಆರ್, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್-76 ಗಾಯತ್ರಿನಗರ |
| 2 | ಶ್ರೀ ಚಿಕ್ಕಗೂಳಿಗೌಡ.ಜೆ.ಜಿ, ಸಹಾಯಕ ಅಭಿಯಂತರರು, ವಾರ್ಡ್-76 ಗಾಯತ್ರಿನಗರ ಹಾಗೂ ಕಾರ್ಯದರ್ಶಿ |
| 3 | ಶ್ರೀ ಕನಕರಾಜು, ಕಂದಾಯ ಪರಿವೀಕ್ಷಕರು |
| 4 | ಶ್ರೀಮತಿ ಶಾರದಾ ಬಾಯಿ, |
| 5 | ಡಾ॥ ಅಂಜನಾ, ಆರೋಗ್ಯ ಅಧಿಕಾರಿ |
| 6 | ಶ್ರೀ ಆರ್.ಸಂತೋಷ್, ಕೆಲಸ ಪರಿವೀಕ್ಷಕರು |
| 7 | ಶ್ರೀ ಮಂಜುನಾಥ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 8 | ಶ್ರೀಮತಿ ಕೃಪಾ ಪ್ರಕಾಶ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 9 | ಶ್ರೀ ಸಂತೋಷ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 10 | ಶ್ರೀ ರಂಗನಾಥ್, ಬೆಸ್ಕಾಂ, ಜೆ.ಇ |
| 11 | ಶ್ರೀ ಸಿದ್ದರಾಜು, ಬಿ.ಡಬ್ಲ್ಯೂಎಸ್ಎಸ್‌ಬಿ |
| 12 | ಶ್ರೀ ಕೊಂಡಯ್ಯ, ಆರೋಗ್ಯ ಪರಿವೀಕ್ಷಕರು |
| 13 | ಶ್ರೀ ಈಶ್ವರ್ ಗೌಡ, ವಾರ್ಡ್ ಅಧ್ಯಕ್ಷ |

ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ಶ್ರೀ ಚಂದ್ರಶೇಖರ್.ಹೆಚ್.ಆರ್ ನೋಡಲ್ ಅಧಿಕಾರಿಗಳು ವಾರ್ಡ್-76 ಇವರು ಸಭೆಯನ್ನು ಮುಂದುವರೆಸಲು ಸೂಚಿಸಿದರು.

**ಕಂದಾಯ ಇಲಾಖೆ :**

- ಕಂದಾಯ ಅಧಿಕಾರಿಗಳು ಕೋವಿಡ್-19 ಕಂಟಾಕ್ಟ್ ಟ್ರೇಸಿಂಗ್ ಗ್ರೂಪ್ 10 ಜನ ಹಾಗೂ ಬಿ.ಎಲ್.ಓ.ಗಳು 9 ಜನ ಕಾರ್ಯ ನಿರ್ವಹಿಸುತ್ತಿರುತ್ತಾರೆಂದು ಸಭೆಯಲ್ಲಿ ತಿಳಿಸಿದರು ಸದರಿಯವರಿಗೆ ದಿನಾಂಕ: 31-08-2021

ರಂದು ವಾರ್ಡ್ ಆಫೀಸ್‌ನಲ್ಲಿ ಮೀಟಿಂಗ್ ನಡೆಸುವಂತೆ ಸೂಚಿಸಲಾಯಿತು. ಕಂದಾಯ ಪಾವತಿಸದ 513 ಡಿಫಾಲ್ಟರ್‌ಗಳಿದ್ದು, ಸುಮಾರು 400 ಮಂದಿಗೆ ನೋಟೀಸ್ ನೀಡಲಾಗಿದೆ ಎಂದು ಸಭೆಯಲ್ಲಿ ತಿಳಿಸಿದರು ಹಾಗೂ ಕಂದಾಯ ವಸೂಲಿಯನ್ನು ಚುರುಕುಗೊಳಿಸುವಂತೆ ತಿಳಿಸಲಾಯಿತು.

**ಆರೋಗ್ಯ ಇಲಾಖೆ :**

- ಸಭೆಯಲ್ಲಿ ಹಾಜರಿದ್ದ ಆರೋಗ್ಯ ಅಧಿಕಾರಿಗಳು ವಾರ್ಡ್ 76ರಲ್ಲಿ 7 ಕೋವಿಡ್–19ನ ಪ್ರಕರಣಗಳಿದ್ದು, ಸರಾಸರಿ ಪ್ರತಿ ದಿನಕ್ಕೆ 1 ಅಥವಾ 2 ಪ್ರಕರಣಗಳು ದಾಖಲಾಗುತ್ತಿವೆ ಎಂದು ತಿಳಿಸಿದರು. ಹಾಗೂ ಪ್ರತಿದಿನ 300ಕ್ಕೂ ಹೆಚ್ಚು ಕೋವಿಡ್–19 ಪರೀಕ್ಷೆ ನಡೆಸಲಾಗುತ್ತಿದೆಯೆಂದು ತಿಳಿಸಿದರು.
- ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಕೋವಿಡ್–19ನ ಪರೀಕ್ಷೆ ನಡೆಸುವಂತೆ ಸಭೆಯಲ್ಲಿ ಸೂಚಿಸಲಾಯಿತು. ಪಿ.ಹೆಚ್.ಸಿ.ಗೆ ವ್ಯಾಕ್ಸಿನೇಷನ್ ಸರಬರಾಜು ಮಾಡಲಾಗುತ್ತಿದೆ ಎಂದು ತಿಳಿಸಿದರು. ಹಾಗೂ ಎಲ್ಲರಿಗೂ ಕೋವಿಡ್–19ನ ನಿಯಮ ಪಾಲಿಸುವಂತೆ ತಿಳಿಸಲು ಸೂಚಿಸಲಾಯಿತು.

**ಬೆಸ್ಕಾಂ ಇಲಾಖೆ :**

- ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಅಧಿಕಾರಿಗಳಿಗೆ ವಿದ್ಯುಚ್ಛಕ್ತಿ ಸಂಬಂಧಿಸದ ಪ್ರಕರಣಗಳಿಗೆ ರೋಡ್ ಕತ್ತರಿಸಿದ ನಂತರ ಸರಿಯಾಗಿ ರೆಸ್ಟೋರೇಶನ್ ಮಾಡುವಂತೆ ಸಭೆಯಲ್ಲಿ ಸೂಚಿಸಲಾಯಿತು.

**ಆರೋಗ್ಯ ಇಲಾಖೆ (ಘನತ್ಯಾಜ್ಯ):**

- ಸಭೆಯಲ್ಲಿ ಭಾಗವಹಿಸಿದ್ದ ಆರೋಗ್ಯ ಅಧಿಕಾರಿಗಳು ಪ್ರತಿದಿನ ಮನೆ ಮನೆಗಳಿಂದ ಘನತ್ಯಾಜ್ಯ ಶೇಖರಣೆಯನ್ನು ಮಾಡಲಾಗುತ್ತಿದೆ ಎಂದು ತಿಳಿಸಿದರು. ಪೌರಕಾರ್ಮಿಕರನ್ನು ನೇಮಿಸಲು ಕಡತವು ಜಂಟಿ ಆಯುಕ್ತರವರ ಕಛೇರಿಯಲ್ಲಿದ್ದು ಅನುಮೋದನೆ ಮಾಡಿಸುವಂತೆ ಸಭೆಯಲ್ಲಿ ತಿಳಿಸಲಾಯಿತು.

**BWSSB ಇಲಾಖೆ (ಘನತ್ಯಾಜ್ಯ):**

- ರಸ್ತೆ ಅಗೆತದ ನಂತರ ರಸ್ತೆಯನ್ನು ರೆಸ್ಟೋರೇಶನ್ ಮಾಡುವಂತೆ ಸಭೆಯಲ್ಲಿ ಸೂಚಿಸಲಾಯಿತು.

ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಾರ್ಯದರ್ಶಿಯವರು ವಂದಾನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಕಾರ್ಯದರ್ಶಿ,
ಸಹಾಯಕ ಅಭಿಯಂತರರು, ವಾರ್ಡ್–76
ಗಾಯತ್ರಿನಗರ, ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ

ಅಧ್ಯಕ್ಷರು
ನೋಡಲ್ ಅಧಿಕಾರಿಗಳು, ವಾರ್ಡ್–76
ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ

# ಪಶ್ಚಿಮ ವಲಯ ವ್ಯಾಪ್ತಿಯ, ಮಲ್ಲೇಶ್ವರಂ ಉಪವಿಭಾಗದ ಗಾಯತ್ರಿನಗರ ವಾರ್ಡ್–76ರಲ್ಲಿ ದಿನಾಂಕ: 07–08–2021 ರಂದು ನಡೆದ ವಾರ್ಡ್ ಸಮಿತಿ ಸಭೆಯ

## ಸಭಾ ನಡವಳಿಗಳು.

**ವಾರ್ಡ್ ಸಂಖ್ಯೆ–76 ಗಾಯತ್ರಿನಗರ** **ಸಮಯ ಮಧ್ಯಹ್ನ ಘಂಟೆಗೆ**

ದಿನಾಂಕ: 07–08–2021 ರಂದು ವಾರ್ಡ್ ಸಂಖ್ಯೆ: 76ರ ಜುಲೈ ಮಾಹೆಯ ವಾರ್ಡ್ ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. ವಾರ್ಡ್ ಸಂಖ್ಯೆ: 76ರ ಸಹಾಯಕ ಅಭಿಯಂತರರು ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತವನ್ನು ಕೋರಿದರು ಹಾಗೂ ಸದಸ್ಯರುಗಳೆಲ್ಲರ ಕಿರು ವಿವರ ತಿಳಿಸಿ, ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಯ್ದುಯಕೊಂಡು ಸಭೆ ನಡೆಸಲು ಕೋರಿದರು.

**ಸಭೆಗೆ ಹಾಜರಿದ್ದವರು:**

| | |
|---|---|
| 1 | ಶ್ರೀ ಚಂದ್ರಶೇಖರ್. ಹೆಚ್.ಆರ್, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್–76 ಗಾಯತ್ರಿನಗರ |
| 2 | ಶ್ರೀ ಚಿಕ್ಕಗೂಳಿಗೌಡ.ಜೆ.ಜಿ, ಸಹಾಯಕ ಅಭಿಯಂತರರು, ವಾರ್ಡ್–76 ಗಾಯತ್ರಿನಗರ ಹಾಗೂ ಕಾರ್ಯದರ್ಶಿ |
| 3 | ಶ್ರೀ ಕನಕರಾಜು, ಕಂದಾಯ ಪರಿವೀಕ್ಷಕರು |
| 4 | ಶ್ರೀಮತಿ ಶಾರದಾ ಬಾಯಿ, |
| 5 | ಡಾ॥ ಅಂಜನಾ, ಆರೋಗ್ಯ ಅಧಿಕಾರಿ |
| 6 | ಶ್ರೀ ಆರ್.ಸಂತೋಷ್, ಕೆಲಸ ಪರಿವೀಕ್ಷಕರು |
| 7 | ಶ್ರೀ ಮಂಜುನಾಥ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 8 | ಶ್ರೀಮತಿ ಕೃಪಾ ಪ್ರಕಾಶ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 9 | ಶ್ರೀ ಸಂತೋಷ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 10 | ಶ್ರೀ ರಂಗನಾಥ್, ಬೆಸ್ಕಾಂ, ಜೆ.ಇ |
| 11 | ಶ್ರೀ ಸಿದ್ದರಾಜು, ಬಿ.ಡಬ್ಲ್ಯೂಎಸ್‌ಎಸ್‌ಬಿ |
| 12 | ಶ್ರೀ ಕೊಂಡಯ್ಯ, ಆರೋಗ್ಯ ಪರಿವೀಕ್ಷಕರು |
| 13 | ಶ್ರೀ ಈಶ್ವರ್ ಗೌಡ, ವಾರ್ಡ್ ಅಧ್ಯಕ್ಷ |

ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ಶ್ರೀ ಚಂದ್ರಶೇಖರ್.ಹೆಚ್.ಆರ್ ನೋಡಲ್ ಅಧಿಕಾರಿಗಳು ವಾರ್ಡ್–76 ಇವರು ಸಭೆಯನ್ನು ಮುಂದುವರೆಸಲು ಸೂಚಿಸಿದರು.

**ಆರೋಗ್ಯ ಇಲಾಖೆ :**

- ಸಭೆಯಲ್ಲಿ ಭಾಗವಹಿಸಿದ್ದ ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಕೋವಿಡ್–19ನ ಪ್ರಕರಣಗಳು ಜಾಸ್ತಿಯಾಗುತ್ತಿದ್ದು, ಕಂಟಾಕ್ಟ್ ಟ್ರೆಸಿಂಗ್ ಮತ್ತು ಹೋಮ್ ಐಸೋಲೇಷನ್ ಬಗ್ಗೆ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು. ಹಾಗೂ ಅಪಾರ್ಟ್‌ಮೆಂಟ್‌ಗಳಲ್ಲಿ ವಾಸಿಸುವವರ ಬಗ್ಗೆ ಹೆಚ್ಚು ಗಮನಹರಿಸುವಂತೆ

ಸಭೆಯಲ್ಲಿ ಸೂಚಿಸಲಾಯಿತು. ಆರೋಗ್ಯ ಇಲಾಖೆಯವರು ಹೊಂದಾಣಿಕೆಯಿಂದ ಕಾರ್ಯನಿರ್ವಹಿಸುವಂತೆ ಸಭೆಯಲ್ಲಿ ಸೂಚಿಸಲಾಯಿತು.

**ಆರೋಗ್ಯ ಇಲಾಖೆ (ಘನತ್ಯಾಜ್ಯ):**

- ಸಭೆಯಲ್ಲಿ ಭಾಗವಹಿಸಿದ್ದ ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಜನಗಳು ಜಾಸ್ತಿ ಸೇರುವ ಕಡೆ ಕೋವಿಡ್ ನಿಯಮಗಳನ್ನು ಪಾಲಿಸುವಂತೆ ಕ್ರಮಕೈಗೊಳ್ಳಲು ಸೂಚಿಸಲಾಯಿತು. ಹಾಗೂ ಪಬ್ಲಿಕ್‌ನಲ್ಲಿ ಮುನ್ನೇಚರಿಕೆ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು. ಸ್ಯಾನಿಟೈಸರ್ ಮಾಡಲು ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು. ಆರೋಗ್ಯ ಇಲಾಖೆಯವರು ಸ್ವಚ್ಚತೆಯನ್ನು ಮಾಡಲು ಮತ್ತು ಬೇರೆ ಇತರೇ ಕಾಯಿಲೆಗಳು ಹರಡದಂತೆ ಕ್ರಮಕೈಗೊಳ್ಳಲು ಸೂಚಿಸಲಾಯಿತು.
- ಪ್ರತಿ ಗುರುವಾರ ಕನ್ಸ್‌ರ್ವೆನ್ಸಿಯಲ್ಲಿ ಸ್ವಚ್ಚತೆಯನ್ನು ಮಾಡುವಂತೆ ಸಭೆಯಲ್ಲಿ ಸೂಚಿಸಲಾಯಿತು. ರವಿ ಬಿರಿಯಾನಿ ಅಂಗಡಿಯಲ್ಲಿ ಜಾಸ್ತಿ ಜನ ಸಂಖ್ಯೆಯ ಸೇರುತ್ತಿದ್ದು, ಕೋವಿಡ್‌ನ ನಿಯಮಗಳನ್ನು ಪಾವತಿಸುವಂತೆ ಸೂಚಿಸಲಾಯಿತು. ಪ್ರತಿ ಗುರುವಾರ ಸ್ಯಾನಿಟೈಸರ್ ಮಾಡುವಂತೆ ಸೂಚಿಸಲಾಯಿತು.

**ಮಾಸ್ಕ್**

- ಕೋವಿಡ್–19ನ ಪ್ರಕರಣಗಳು ಜಾಸ್ತಿಯಾಗುತ್ತಿದ್ದು, ಮಾಸ್ಕ್ ಧರಿಸದವರಿಗೆ ದಂಡ ವಿಧಿಸುವಂತೆ ಸಭೆಯಲ್ಲಿ ಸೂಚಿಸಲಾಯಿತು.

**ಪೋಲೀಸ್ ಇಲಾಖೆ**

- ಮಾರ್ಕೆಟ್ ಸ್ಥಳಗಳಲ್ಲಿ ಜನಸಂಖ್ಯೆ ಸೇರದಂತೆ ಆರೋಗ್ಯ ಇಲಾಖೆಯವರು ಸಹಕಾರದೊಂದಿಗೆ ಕೋವಿಡ್‌ನ ನಿಯಮಗಳನ್ನು ಪಾವತಿಸುವಂತೆ ಸಾರ್ವಜನಿಕರಲ್ಲಿ ಅವೇರ್‌ನೇಸ್ ಮೂಡಿಸುವಂತೆ ಸಭೆಯಲ್ಲಿ ಸೂಚಿಸಲಾಯಿತು.

**ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಾರ್ಯದರ್ಶಿಯವರು ವಂದಾನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.**

**ಕಾರ್ಯದರ್ಶಿ,**
**ಸಹಾಯಕ ಅಭಿಯಂತರರು, ವಾರ್ಡ್–76**
**ಗಾಯತ್ರಿನಗರ, ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ**

ಅಧ್ಯಕ್ಷರು
**ನೋಡಲ್ ಅಧಿಕಾರಿಗಳು, ವಾರ್ಡ್–76**
**ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ**